# <u>ವಾಹನ ಖರೀದಿ ಸಾಲ</u>

<table>
<tr><th>ಕ್ರ. ಸಂ</th><th>ವಿಷಯಗಳು</th><th>ನಿಯಮಗಳು</th></tr>
<tr><td>1.</td><td>ಉದ್ದೇಶ<br>(purpose)</td><td>ನಾಲ್ಕು ಚಕ್ರದ ವಾಹನವನ್ನು ಕೊಳ್ಳಲು ಗ್ರಾಹಕರಿಗೆ ಸಾಲ ಕೊಡುವುದು.</td></tr>
<tr><td>2.</td><td>ಅರ್ಹತೆ(Eligibility )</td><td>ಸಾರ್ವಜನಿಕರು, ವೃತ್ತಿಪರರು, ವ್ಯಾಪಾರಸ್ಥರು, ಸರಕಾರಿ ಮತ್ತುಅರೆ ಸರಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು, ಸಹಕಾರ ಸಂಸ್ಥೆಗಳ ನೌಕರರು, ಬ್ಯಾಂಕಿನ ನೌಕರರು ಸ್ವಂತಉದ್ಯೋಗಸ್ತರು ಹಾಗೂ ವ್ಯವಸಾಯಗಾರರು–ವಾಹನ ಚಾಲನೆ ಲೈಸೆನ್ಸ್ ಪಡೆದಿರುವರು ಈ ಸಾಲ ಪಡೆಯಲುಅರ್ಹರಾಗಿರುತ್ತಾರೆ.<br>1) ವಾಹನ ಖರೀದಿಗೆಒಬ್ಬ ವ್ಯಕ್ತಿಗೆ ವಾಹನ ಖರೀದಿ ಬೆಲೆಯ ಶೇ.75 ರಷ್ಟು, ಮೊತ್ತವನ್ನು ಸಾಲವಾಗಿ ಮಂಜೂರು ಮಾಡುವುದು. ಈ ಮೊತ್ತವನ್ನು ಹೊರತುಪಡಿಸಿ ವಾಹನ ಖರೀದಿಗೆಅಗತ್ಯವಿರುವ ಉಳಿಕೆ ಮೊತ್ತವನ್ನು ಸಾಲಗಾರನೇ ಭರಿಸಬೇಕಾಗಿದ್ದು, ಬ್ಯಾಂಕಿಗೆ ಪಾವತಿಸಿದಲ್ಲಿ ಒಟ್ಟು ಮೊತ್ತಕ್ಕೆ ಮಾರಾಟಗಾರ ಸಂಸ್ಥೆಯಹೆಸರಿಗೆಡಿ.ಡಿ/ ಆರ್.ಟಿ.ಜಿ.ಎಸ್./ನೆಫ್ಟ್‌ನೀಡಲಾಗುವುದು.<br>2) ಸರ್ಕಾರಿ/ಅರೆ ಸರ್ಕಾರಿ ನೌಕರನಾಗಿದ್ದಲ್ಲಿ, ಅರ್ಜಿದಾರ ಮತ್ತುಜಾಮೀನುದಾರರು 55 ವರ್ಷದ ವಯೋಮಿತಿಯೊಳಗಿರಬೇಕು.<br>3) ಕ್ರೆಡಿಟ್ ಸ್ಕೋರಿಂಗ್‌ತೃಪ್ತಿದಾಯಕವಾಗಿರಬೇಕು.</td></tr>
<tr><td>3.</td><td>ಸಾಲದ ಮಿತಿ<br>(Quantum of loan)</td><td>ವಾಹನದ ಬೆಲೆ ಮಾರ್ಜಿನ್ ಕಳೆದು ನೋಂದವಣೆಯಫೀ, ಲೈಫ್‌ಟೈಮ್‌ತೆರಿಗೆ, ಹಾಗೂ ವಾಹನ ವಿಮೆಯ ಖರ್ಚನ್ನು ಸಾಲದ ಮಿತಿಯಲ್ಲಿ ಸೇರಿಸಬಹುದು. ಗರಿಷ್ಟರೂ.30.00 ಲಕ್ಷಗಳು</td></tr>
<tr><td>4</td><td>ಮಂಜೂರಾತಿ ಮತ್ತುಬಟವಾಡೆ</td><td>ಮಂಜೂರು ಮಾಡಿದ ಸಾಲವನ್ನು ಮತ್ತು ಮಾರ್ಜಿನ್ ಹಣ ಸೇರಿಸಿ ಒಟ್ಟು ಮೊತ್ತವನ್ನು ನೇರವಾಗಿವಾಹನ ಸರಬರಾಜು ಮಾಡುವ ಸಂಸ್ಥೆಗೆ ಆರ್.ಟಿ.ಜಿ.ಎಸ್/ನೆಫ್ಟ್/ಡಿ.ಡಿ ಮುಖಾಂತರ ಬಟವಾಡೆ ಮಾಡಬೇಕು.</td></tr>
<tr><td>5.</td><td>ಮರುಪಾವತಿ(Repayment)</td><td>ಬಟವಾಡೆಯಾದ ಸಾಲವನ್ನು 3 ವರ್ಷದಿಂದ6 ವರ್ಷಗಳಲ್ಲಿ ಸಮನಾದ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ವಾಹನಕ್ಕೆ ಪಡೆಯುವ ಸಾಲವನ್ನು ಸಾಲ ಪಡೆದ ದಿನಾಂಕದಿಂದ ಬಡ್ಡಿ ಸಹಿತ72 ಸಮ ಕಂತುಗಳಲ್ಲಿಯೂ ಮರುಪಾವತಿ ಮಾಡತಕ್ಕದ್ದು.</td></tr>
<tr><td>6</td><td>ಮಾರ್ಜಿನ್ ಮತ್ತು ಭದ್ರತೆ(Margin & security)</td><td>
<table>
<tr><th>ವರ್ಗ</th><th>ಮಿತಿ</th><th>ಮಾರ್ಜಿನ್</th><th>ಭದ್ರತೆ</th></tr>
<tr><td rowspan="2">ಎಲ್ಲಾ ವರ್ಗದ ಸಾಲಗಾರರು</td><td>ರೂ.10.00 ಲಕ್ಷದ ವರೆಗೆ</td><td>25%</td><td>1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆಆಧಾರ ಮಾಡುವುದು.<br>2. ಸಹಕಾರಿಕ ಭದ್ರತೆ: ಸ್ಥಿರಾಸ್ತಿ ಹೊಂದಿರುವ ಮೂರನೇ ವ್ಯಕ್ತಿಯಜಾಮೀನು.</td></tr>
<tr><td>ರೂ.10.00 ಲಕ್ಷ ಮೇಲ್ಪಟ್ಟು</td><td>25%</td><td>1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆಆಧಾರ ಮಾಡುವುದು.<br>2. ಸಹಕಾರಿಕ ಭದ್ರತೆ: (Collateral)</td></tr>
</table>
</td></tr>
</table>

| | | |
|---|---|---|
| | | <table><tr><td></td><td></td><td></td><td>1. ಅರ್ಜಿದಾರರು ಹೊಂದಿರುವ ಸ್ಥಿರಾಸ್ತಿಯನ್ನು ಬ್ಯಾಂಕಿನ ಹೆಸರಿಗೆಡಿ.ಟಿ.ಡಿ. ಮೂಲಕ ನೋಂದಾಯಿಸುವುದು.<br>2. ಸ್ಥಿರಾಸ್ತಿ ಹೊಂದಿರುವ ಮೂರನೇ ವ್ಯಕ್ತಿಯಜಾಮೀನು.</td></tr></table>1) ಖರೀದಿಸಿದ ವಾಹನವನ್ನು ಬ್ಯಾಂಕಿನ ಹೆಸರಿಗೆತೋರಾಧಾರ (ಹೈಪಾಥೀಕೇಶನ್) ಮಾಡಿಕೊಡತಕ್ಕದ್ದು.<br>2) ಅರ್ಜಿದಾರನುಕೃಷಿಕನಾಗಿದ್ದಲ್ಲಿ, ಸ್ವಂತಉದ್ಯೋಗದಲ್ಲಿತೊಡಗಿದ್ದಲ್ಲಿ, ವ್ಯಾಪಾರಸ್ಥನಾಗಿದ್ದಲ್ಲಿ, ಇವರಿಗೆ ಪ್ರಥಮದರ್ಜೆಗುಮಾಸ್ತರ ಹುದ್ದೆಯ ಶ್ರೇಣಿಗಿಂತಕಡಿಮೆಇಲ್ಲದ ಸರ್ಕಾರಿ ನೌಕರರಿಂದಜಾಮೀನು ಪಡೆಯುವುದು. ಸರ್ಕಾರಿ ನೌಕರನಜಾಮೀನು ನೀಡಲು ಸಾಧ್ಯವಾಗದಿದ್ದಲ್ಲಿ, ಅಷ್ಟೇ ಮೌಲ್ಯದ ಬ್ಯಾಂಕಿಗೆಒಪ್ಪಿಗೆಯಾಗುವ ಸ್ಥಿರಾಸ್ತಿಯನ್ನು ಭದ್ರತೆಯಾಗಿ ನೀಡತಕ್ಕದ್ದು. ಸರ್ಕಾರಿ ನೌಕರನಾಗಿದ್ದಲ್ಲಿ ಮತ್ತೊಬ್ಬ ಸರ್ಕಾರಿ ನೌಕರನಜಾಮೀನು ಪಡೆಯುವುದು.<br>3) ಸಾಲ ಬಿಡುಗಡೆ ವೇಳೆ ವಾಹನದ ಮೂಲ ಆರ್.ಸಿ ಪುಸ್ತಕ ಮತ್ತು ವಾಹನದಎರಡನೇ ಸೆಟ್ ಕೀಗಳನ್ನು ಬ್ಯಾಂಕಿನ ವಶಕ್ಕೆ ಒಪ್ಪಿಸುವುದು. ಈ ಕೀಗಳನ್ನು ಸಾಲದ ಮೂಲ ಕಡತದೊಂದಿಗೆ ಶಾಖೆಯತಿಜೋರಿಯಲ್ಲಿಜಂಟಿಜವಾಬ್ದಾರಿಯಲ್ಲಿ ಭದ್ರಪಡಿಸತಕ್ಕದ್ದು. |
| 7 | **ವಾಹನ ವಿಮೆ(insurance)** | ಖರೀದಿಸಿದ ವಾಹನವನ್ನುಅಧಿಕೃತ ವಿಮಾಕಂಪನಿಯಲ್ಲಿಜಂಟಿ ವಿಮೆಮಾಡಿಸಬೇಕು. ಈಗ ಪಡೆದಂತಹ ಪಾಲಿಸಿಯು ಸಾಲ ಸಂಪೂರ್ಣವಾಗಿ ಮರುಪಾವತಿಯಾಗುವವರೆಗೆಜಾರಿಯಲ್ಲಿಇರಬೇಕು. |
| 8 | **ಕಾನೂನುಸಲಹೆ (legal opinion)** | ಸ್ಥಿರ ಅಸ್ತಿಗಳನ್ನು ಸಾಲಕ್ಕೆ ಅಧಾರವಾಗಿಕೊಡುತ್ತಾರೋ, ಅಂತಹ ಸಮಯದ್ಲ್ಲಿ ಸದರಿ ಆಸ್ತಿಯ ಎಲ್ಲಾಕಾಗದ ಪತ್ರಗಳನ್ನು ಕಾನೂನು ತಜ್ಞರಿಗೆಅಂದರೆ ಬ್ಯಾಂಕಿನ ಪ್ಯಾನಲ್ ವಕೀಲರಿಗೆಕೊಟ್ಟು ಪರಿಶೀಲಿಸಬೇಕು. ಹಾಗೂ ಅವರ ಸಲಹೆಯನ್ನು ಪಡೆಯಬೇಕು. ಶಾಖಾ ವ್ಯವಸ್ಥಾಪಕರು ವಕೀಲರು ನೀಡಿದ ಕಾನೂನು ಅಭಿಪ್ರಾಯವನ್ನು ಕುಲಂಕಶವಾಗಿ ಪರಿಶೀಲಿಸಿ ಸಂಬಂಧಪಟ್ಟ ಪ್ರಸ್ತಾವೆಗಳಿಗೆ ಸಾಲಗಾರರು/ ಜಾಮೀನುದಾರರ ಸಹಿ ಪಡೆಯಬೇಕು. |
| 9 | **ಬಡ್ಡಿದರ** | |
| 10. | **ಇತರೆ ನಿಯಮಗಳು(Other)** | 1. ಸಾಲವನ್ನು ಹೊಸವಾಹನಗಳನ್ನು ಕೊಳ್ಳಲು ಮಾತ್ರ ಮಂಜೂರು ಮಾಡಬೇಕು.<br>2. ಬ್ಯಾಂಕಿನಚಾರ್ಜನ್ನು ಸಂಬಂಧ ಪಟ್ಟಆರ್.ಟಿ.ಓ ವಾಹನದ ಆರ್.ಸಿ ಪುಸ್ತಕದಲ್ಲಿ ನಮೂದಿಸಬೇಕು. |
| 11 | **ತೆಗೆದು ಕೊಳ್ಳಬೇಕಾದ ದಾಖಲೆಗಳು(Document to be obtained)** | 1. ವಾಹನ ಸಾಲಕ್ಕೆ ಅರ್ಜಿ, ಸಂದರ್ಶನ, ಮೌಲ್ಯ ಮಾಪನ ಮತ್ತು ಪ್ರಸ್ತಾವೆ<br>2. ವಾಹನ ಸಾಲದ ಮಂಜೂರಾತಿಯ ಷರತ್ತುಗಳು ಮತ್ತು ನಿಬಂಧನೆಗಳು.<br>3. ವಾಹನ ಸಾಲದಜ್ಞಾಪಕಒಪ್ಪಂದ ಪತ್ರ(Memorandum of Agreement)<br>4. ವಾಹನ ಸಾಲದಒಪ್ಪಂದ ಪತ್ರ(Agreement for Vehicle loan)<br>5. ಜಾಮೀನುಒಪ್ಪಂದ(Guarantee Agreement),<br>6. ವಾಹನ ಸಾಲದ ಡಿ.ಪಿ.ಎನ್& ಡಿ.ಪಿ. ಡೆಲಿವರಿ ಪತ್ರ(D.P.N & D.P Delivery Letter for Vehicle Loan)<br>7. ಆರ್.ಟಿ.ಓ ನಮೂನೆ ಸಂಖ್ಯೆ 29 ಮತ್ತು 30 (ದ್ವಿ ಪ್ರತಿಯಲ್ಲಿ) ತಾರೀಖು ಹಾಕಬಾರದು.<br>8. ಹತ್ತು ಲಕ್ಷಕಿಂತ ಹೆಚ್ಚು ಮಿತಿಯುಳ್ಳ ಸಾಲಗಳಿಗೆ ಸ್ಥಿರ ಆಸ್ತಿಯನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ ಅಂತಹ ಸಂದರ್ಭದಲ್ಲಿಅಡಮಾನ ಪತ್ರವನ್ನು ಸಂಬಂಧಪಟ್ಟಉಪನೊಂದಣಾಧಿಕಾರಿಯಲ್ಲಿ ನೊಂದಾಯಿಸಬೇಕು. |
| 12 | **ವಿಮೆ** | 1. ವಾಹನದ ಪೂರ್ಣ ಮೌಲ್ಯಕ್ಕೆ ವಿಮೆ ಮಾಡಿಸಿರತಕ್ಕದ್ದು ಹಾಗೂ ವಿಮೆ ಪಾಲಿಸಿಯು ಬ್ಯಾಂಕು ಹಾಗೂ ಸಾಲ ಪಡೆದವರಜಂಟಿ ಹೆಸರಿನಲ್ಲಿರತಕ್ಕದ್ದು. |
| 13 | **ತೋರಾಧಾರ(Hypothication)** | 1. ಖರೀದಿಸಿದ ವಾಹನವನ್ನು ಬ್ಯಾಂಕಿಗೆತೋರಾಧಾರ ಮಾಡಿಕೊಡತಕ್ಕದ್ದು<br>2. ವಾಹನದ ಮೇಲೆ " ಬೆಂಗಳೂರು ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು" ಬ್ಯಾಂಕಿಗೆತೋರಾಧಾರ ಮಾಡಲ್ಪಟ್ಟಿದೆಎಂದು ಬರೆದಿರತಕ್ಕದ್ದು.(Hypothicated to Bengaluru District Central Co-operative Bank Ltd., Bengaluru ಎಂದು ಬರೆಸಿರತಕ್ಕದ್ದು). |
| | | |